ಓಂ ಶ್ರೀಂ ಶ್ರೀಂ

# ಶ್ರೀ ವಾಸವಿ ಕನ್ಯಕಾ ದೇವಿ ಪುರಾಣ

## ಅಷ್ಟಾದಶಾಧ್ಯಾಯ

ಪರಮಕಾರಣ್ಯದಿಂದ ಪ್ರತ್ಯಕ್ಷಳಾಗಿ ಅನುಗ್ರಹಿಸಿದ ಶ್ರೀವಾಸವಿ ಕನ್ಯಕಾ ಪರಮೇಶ್ವರಿಯನ್ನು ದರ್ಶಿಸಿ ಆ ದೇವಿಯ ವಚನಗಳನ್ನು ಆಲಿಸಿ ಭಾಸ್ಕ ರಾಚಾರ್ಯರು ಆ ದೇವಿಯನ್ನು ಕುರಿತು,' ಹೇ ಜಗನ್ಮಾತೇ ! ಜ್ಞಾನವೈರಾಗ್ಯಗಳಿಲ್ಲದಿದ್ದರೆ ನಿನ್ನ ಸನ್ನಿಧಿ ಸಿಗುವುದಿಲ್ಲವೆನ್ನುವರು ಅಲ್ಲವೇ ? ಅಂಥ ಜ್ಞಾನ ವೈರಾಗ್ಯಗಳಿಲ್ಲದ ಮದ್ಯಮಾಧಿಕಾರಿಗಳಾದ ಸಾಮನ್ಯರಿಗೂ ಕೂಡ ನಿನ್ನ ಸಾನ್ನಿಧ್ಯ ಲಭಿಸುವ ಸುಲಭ ಮಾರ್ಗವನ್ನು ದಯೆಮಾಡಿ ಉಪದೇಶಿಸು,'ಎಂದು ಪ್ರಾರ್ಥಿಸಿದರು.

ಆಗ ಶ್ರೀ ಕನ್ಯಕಾ ಪರಮೇಶ್ವರಿಯು ಗುರುಭಾಸ್ಕರರನ್ನು ಮತ್ತು ಪ್ರಿಯಜನಾವಳಿಯನ್ನು ವಿಶೇಷ ವಾತ್ಸಲ್ಯದಿಂದ ಕಂಡು **'ಪುತ್ರರೇ ! ಅಂಥ ಸುಲಭಮಾರ್ಗವು ಪರಾಭಕ್ತಿಯೆನಿಸುವುದು. ನೀವು ಈಗ ಆ ಪರಾಭಕ್ತಿಯನ್ನು ಕುರಿತು ಸಾವಧಾನವಾಗಿ ಕೇಳಿರಿ. ಸದಾಕಾಲ ನನ್ನ ಗುಣಗಾನದ ಕಥೆಗಳನ್ನು ಕೇಳುವುದು, ನನ್ನ ನಾಮವನ್ನು ಜಪಿಸುವುದು ನನ್ನಲ್ಲಿ ಅವಿಚ್ಛಿನ್ನ ತೈಲಧಾರೆಯಂತೆ ಮನೋವೃತ್ತಿಯನ್ನು ಅಖಂಡವಾಗಿ ನಿಲ್ಲಿಸುವುದು ಎಂಬವುಗಳು ಪರಾಭಕ್ತಿಯ ಲಕ್ಷಣಗಳು.'**

ನನ್ನನ್ನು ಸರ್ವೋತ್ಕೃಷ್ಟ ಅನುರಾಗದಿಂದ ಚಿಂತಿಸುವ ಭಕ್ತನು ನನ್ನನ್ನು ತನಗಿಂತ ಬೇರಾಗಿ ಎಣಿಸದೆ ಅಭೇದವಾಗಿ ಭಾವಿಸಬಲ್ಲನು. ಯಾರು ಸಮಸ್ತ ಜೀವಿಗಳಲ್ಲಿ ನನ್ನನ್ನು ನೋಡಬಲ್ಲನೋ, ಯಾರು ತನ್ನನ್ನು ತಾನು ಪ್ರೇಮಿಸಿಕೊಳ್ಳವಂತೆ ಸರ್ವಜೀವರನ್ನು ಪ್ರೇಮಿಸಬಲ್ಲನೋ, ಯಾರು ನನ್ನನ್ನು ಎಲ್ಲರೂಪಗಳಿಂದ ಎಲ್ಲೆಡೆಗಳಲ್ಲಿರುವ ಶುದ್ಧ ಚೈತನ್ಯ ಸ್ವರೂಪಿಣಿಯಾಗಿ ತಿಳಿಯಬಲ್ಲನೋ, ಸದ್ವಿಪ್ರರಿಂದ ಹಿಡಿದು ಚಂಡಾಲರವರೆಗೂ ಸಮಸ್ತ ಜನರನ್ನು ಯಾರು ಸಮಾನಭಾವದಿಂದ ಆದರಿಸಬಲ್ಲರೋ, ಯಾರು ಈ ಅನಂತ ವಿಶ್ವದಲ್ಲಿ

ನಾನಲ್ಲದೇ ಎರಡನೇ ಪದಾರ್ಥವೇ ಇಲ್ಲವೆಂಬ ನಂಬಿಕೆಯುಳ್ಳವರೋ ಯಾರು ಯಾವ ಜೀವಿಗೂ ಅಪಕಾರ ಮಾಡಲೇಣಿಸುವುದಿಲ್ಲವೋ, ಯಾರಿಗೆ ನನ್ನನ್ನು, ನನ್ನ ಸ್ಥಾನಗಳನ್ನು ನನ್ನ ಭಕ್ತರನ್ನು ದರ್ಶಿಸುವುದರಲ್ಲಿಯೂ, ವೇದಾಂತಾದಿ ನನ್ನ ಶಾಸ್ತ್ರಗಳನ್ನು ಶ್ರವಣಮಾಡುವುದರಲ್ಲಿಯೂ, ನನ್ನ ಮಂತ್ರತಂತ್ರಗಳಲ್ಲಿಯೂ ಅಮಿತ ಶ್ರದ್ಧಾಸಕ್ತಿಗಳಿರುವುವೋ, ನನ್ನ ಭಕ್ತಿಪಾರವಶ್ಯದಿಂದ ಯಾರ ಶರೀರವು ಪುಲಕಿತಗೊಳ್ಳವುದೋ, ಆನಂದ ಭಾಷ್ಪಗಳಿಂದ ಕಣ್ಣುಗಳು ತುಂಬಿಹೋಗುವುವೋ, ಕಂಠಧ್ವನಿಯು ಗದ್ಗದವಾಗುವುದೋ, ಅಂಥವನು ಯಾವ ಫಲಾಪೇಕ್ಷೆಯೂ ಇಲ್ಲದೆ ಕೇವಲ ನನ್ನನ್ನು ಆನಂದ ಪಡಿಸುವುದಕ್ಕಾಗಿ ಮಾತ್ರವೇ ನನ್ನಲ್ಲಿ ಚಿತ್ತವನ್ನು ನಿಲ್ಲಿಸಬಲ್ಲನು. **ಅವನು ಕೇವಲ ನನ್ನ ಮೇಲಿರುವ ಪ್ರೇಮದಿಂದ ಮಾತ್ರವೇ ನನ್ನನ್ನು ಪ್ರೇಮಿಸುವನು. ನನ್ನ ಭಕ್ತನು ನನಗಿಂತ ಮಿಗಿಲಾದ ವಸ್ತುವನ್ನು ಸ್ವಲ್ಪವೂ ಅರಿಯನು.** ಅಂಥವನು ಸೇವೆ, ಸೇವಾ ಮನೋಭಾವನ್ನು ತೊರೆದು ನನ್ನಲ್ಲಿ ಐಕ್ಯವನ್ನು ಹೊಂದಬಲ್ಲನು. ಯಾರು ಲೋಭವನ್ನು ಬಿಟ್ಟು ಪರಮಪವಿತ್ರವಾದ ನನ್ನ ವ್ರತಗಳನ್ನು ನಿತ್ಯನೈಮಿತ್ತಿಕಗಳಾದ ವೈದಿಕ, ಸ್ಮಾರ್ತ, ಪೌರಾಣಿಕ ಕರ್ಮಗಳನ್ನು ಭಕ್ತಿಯಿಂದ ಮಾಡುತ್ತಿರುವನೋ, ಯಾರು ನನ್ನ ಉತ್ಸವಗಳನ್ನು ಪರಮಭಕ್ತಿಯಿಂದ ನಿರ್ವಹಿಸುವನೋ, ಅನ್ಯರು ಮಾಡುತ್ತಿರುವಾಗ ಅವರನ್ನು ನೋಡುವ ಕೋರಿಕೆಯುಳ್ಳವನಾಗುವನೋ, ಯಾರು ದೇಹಾಭಿಮಾನ, ನಾಚಿಕೆ, ಸಂಕೋಚಗಳನ್ನು ತೊರೆದು ಪವಿತ್ರವಾದ ನನ್ನ ನಾಮ ಸಂಕೀರ್ತನಾದಿಗಳನ್ನು ಹಾಡುತ್ತಾ ಕುಣಿಯುವನೋ ಆ ಪರಮ ಭಾಗವತೋತ್ತಮನು ಕೂಡ ನನ್ನನ್ನೇ ಸೇರಬಲ್ಲನು. **ಸರ್ವಾಶ್ರಯಳಾದ ನನ್ನನ್ನು ಕುರಿತು ಹೊಂದುವ ಅಮೂಲ್ಯಾನಂತ ಪ್ರೇಮವೇ ಭಕ್ತಿಯು.**

ಆ ಮಾತುಗಳನ್ನು ಕೇಳಿದ ಭಕ್ತರು ದೇವಿಯನ್ನು ಕಂಡು,'ಹೇ ಪರಮೇಶ್ವರಿ ! ಈ ಧರೆಯಲ್ಲಿ ಪುಣ್ಯಕ್ಷೇತ್ರಗಳಲ್ಲಿ ಯಾವುವು ನಿನಗತ್ಯಂತ ಪ್ರೇಮಾಸ್ಪದಗಳಾಗಿವೆಯೋ, ಯಾವ ಯಾವ ವ್ರತಗಳು ಮತ್ತು ಉತ್ಸವಗಳು ನಿನಗೆ ಹೆಚ್ಚಿನ ಸಂತೋಷಕರವೋ ಅವುಗಳನ್ನೆಲ್ಲ ದಯೆಮಾಡಿ ನಮಗೆ ತಿಳಿಸಿ ಹೇಳು,' ಎಂದು ಪ್ರಾರ್ಥಿಸಿದರು.

## ವಾಸವಿದೇವಿಯು ಸರ್ವೋತ್ತಮ ವ್ರತೋತ್ಸವ ಕ್ಷೇತ್ರಾದಿಗಳನ್ನು ಕುರಿತು ತಿಳಿಸುವುದು :

ಆಗ ವಾಸವಿ ಕನ್ಯಕಾಪರಮೇಶ್ವರಿಯು,' ಪುತ್ರರೇ ! ನಿಜದಲ್ಲಿ ಈ ಪ್ರಪಂಚದಲ್ಲಿ ಕಾಣಬರುವ ಪ್ರದೇಶದಲ್ಲೆಲ್ಲ ನಾನೇ ಇರುವುದರಿಂದ ಎಲ್ಲವೂ ಪುಣ್ಯಕ್ಷೇತ್ರವೇ ಆಗುವುದು. ನಾನು ಅನಂತ ಕಾಲಸ್ವರೂಪಿಣಿಯಾದುದರಿಂದ ಎಲ್ಲ ಕಾಲಗಳೂ ನನ್ನ ಪೂಜಾವ್ರತ ಸಮಯಗಳೇ ಆಗುವುವು. ಎಲ್ಲ ಇಂದ್ರಿಯಗಳಿಂದ ಹೊಂದಲ್ಪಡುವ ಸರ್ವವಿಧ ವಿಷಯಾನುಭವಗಳೆಲ್ಲ ಅಖಂಡ ಚೈತನ್ಯ ಮೂರ್ತಿಯಾದ ನನ್ನಿಂದಲೇ ನಡೆಯುತ್ತಿವೆ. ಆದ್ದರಿಂದ ಅದೆಲ್ಲವೂ ನನ್ನ ಉತ್ಸವವೇ ಆಗುವುದು. ಆದರೂ ನಿಮ್ಮಲ್ಲಿಯ ವಾತ್ಸಲ್ಯದಿಂದ ಕೇಲವು ಮುಖ್ಯ ವಿಷಯಗಳನ್ನು ತಿಳಿಸಿಕೊಡುತ್ತಿರುವೆ. ಸಾವಧಾನವಾಗಿ ಆಲಿಸಿರಿ.

ಈ ಭುವಿಯಲ್ಲಿ ವಿವಿಧ ವಿಭೂತಿಗಳಾದ **108** ಶಕ್ತಿ ಪೀಠಗಳು ಸುಪ್ರಸಿದ್ಧವಾಗಿವೆ. ಅವುಗಳಲ್ಲಿ ಅಷ್ಟಾದಶ ಶಕ್ತಿ ಪೀಠಗಳು (18)ಮಹೋತ್ಕೃಷ್ಟ ಮಹಿಮಾನ್ವಿತಗಳಾಗಿವೆ. ಸಾಧಕನು ಇಂಥ ಅನೇಕ ತೀರ್ಥಗಳನ್ನು ಸೇವಿಸಲಾಗದಿದ್ದಾಗ ಮಹಾಪವಿತ್ರವಾದ ಒಂದು **ಮಹಾಗಿರಿ** ಅಂದರೆ ಈ **ಪೆನುಗೊಂಡೆ ಕ್ಷೇತ್ರವನ್ನು** ಆಶ್ರಯಿಸಿದರೆ ಸಾಕು. ಬ್ರಹ್ಮಕುಂಡ ಸಮೀಪದಲ್ಲಿ ನಿರ್ಮಿಸಲ್ಪಟ್ಟಿರುವ ಪೆನುಗೊಂಡೆ ಕ್ಷೇತ್ರದಲ್ಲಿ ಸಮಸ್ತ ಪುಣ್ಯಕ್ಷೇತ್ರಗಳ ಮಹತ್ವವು ತುಂಬಿರುತ್ತದೆ. ನನ್ನ ಈ ಕ್ಷೇತ್ರದಲ್ಲಿ ನನ್ನನ್ನು ದರ್ಶಿಸಿ ಶುಭಸಂಧಾಯಿನಿಯಾದ ನನ್ನನ್ನು ಅನನ್ಯಭಕ್ತಿಯಿಂದ ಸೇವಿಸುವ ಭಕ್ತನು ಭವಬಂಧನಗಳಿಂದ ವಿಮುಕ್ತನಾಗುವನು.

ಇನ್ನು ನನಗೆ ಪ್ರಿಯಕರವಾದ ವ್ರತಯಜ್ಞೋತ್ಸವಾದಿಗಳನ್ನು ಅವುಗಳನ್ನು ನಿರ್ವಹಿಸುವ ವಿಧಾನಗಳನ್ನು ಸಾವಧಾನಚಿತ್ತರಾಗಿ ಕೇಳಿರಿ. **ಶುಕ್ರವಾರವ್ರತವು ನನಗೆ ಬಹುಪ್ರೀತಿಕರವಾದುದು. ವೈಶಾಖಮಾಸದಲ್ಲಿ ನಡೆಯುವ ನನ್ನ ಜಯಂತಿ ಸಮಯದಲ್ಲಿ ಆಶ್ವಯುಜ ಮಾಸದಲ್ಲಿ ನಡೆಯುವ ನನ್ನ ಶರನ್ನವರಾತ್ರಿ ಉತ್ಸವಗಳ ಸಂದರ್ಭಗಳಲ್ಲಿ, ಮಾಘಮಾಸದಲ್ಲಿ ಜರುಗುವ ನನ್ನ ವಿಶ್ವರೂಪಸಂದರ್ಶನ ಪರ್ವದಿನ ಸಂದರ್ಭದಲ್ಲಿಯು ಮತ್ತು ಚೈತ್ರಮಾಸದಲ್ಲಿ ನಡೆಯುವ ವಸಂತ ನವರಾತ್ರಿ ಉತ್ಸವಗಳ ಸಂದರ್ಭಗಳಲ್ಲಿಯು** ಮಾಡುವ ಮಂಡಲದೀಕ್ಷಾಸಹಿತವಾದ **40** ದಿನಗಳ ಪೂಜಾ ವ್ರತಾದಿಗಳು ನನಗೆ ಅತ್ಯಂತ ಪ್ರಿಯವೆನಿಸುವುವು. ನನ್ನ ಅಂಗೋಪಾಂಗದೇವತಾ

ಸಹಿತವಾಗಿ ಮಾಡುವ ಶ್ರೇಷ್ಠ ಪೂಜಾವಿಧಾನವಾದ **ಶ್ರೀವಾಸವಿ ಕನ್ಯಕಾ ವ್ರತವು ಸರ್ವೋತ್ತಮವಾದುದು.** ವೈಶಾಖ ಶುದ್ಧದಶಮಿಯ ದಿನ ಈ ವ್ರತವನ್ನು ಆಚರಿಸುವುದು ಸರ್ವಶುಭದಾಯಕ ವಾಗುವುದು. ಅಷ್ಟೇ ಅಲ್ಲದೇ ನನ್ನ ಭಕ್ತರು ತಮ್ಮ ಗೃಹಗಳಲ್ಲಿ ನಡೆಸಿಕೊಳ್ಳುವ ವಿವಾಹಾದಿ ಶುಭಕಾರ್ಯಗಳಲ್ಲಿಯು, ಗೃಹಪ್ರವೇಶಾದಿ ಶುಭಕಾರ್ಯಗಳಲ್ಲಿಯು ಈ ನನ್ನ ವ್ರತವನ್ನು ನಡೆಸಿದರೆ ಅವರಿಗೆ ಅಭೀಷ್ಟ ಫಲಗಳು ಸಿದ್ದಿಸುವುವು. ದ್ಯುತ್ತರ ಶತ (102) ಹೋಮಕುಂಡಗಳೊಡನೆ ನನ್ನ ಆರಾಧನಾ ವಿಧಾನವಾಗಿ ಶೋಭಿಸುವ **ಶ್ರೀವಾಸವಿ ಕನ್ಯಕಾದೇವಿ ಮಹಾಯಜ್ಞವು** ಅಮೋಘ ಫಲಪ್ರದವಾದುದು. **ಮಾಘಶುದ್ಧ ಬಿದಿಗೆಯಂದು** ಆ ಮಹಾಯಜ್ಞವನ್ನು ನಡೆಸುವುದು ಸರ್ವೋತ್ತಮ. ಹಾಗಲ್ಲದಿದ್ದರೆ ನನ್ನೀ ಮಹಾಯಜ್ಞವನ್ನಾಗಲೀ ವ್ರತವನ್ನಾಗಲೀ ಪಂಚಾಂಗ ಶುದ್ಧಿಯುಳ್ಳ ಯಾವ ದಿನದಲ್ಲಾದರೂ ಭಕ್ತರು ನಡೆಸಿ ಕೊಳ್ಳಬಹುದು.

ಓ ಭಕ್ತಜನರೇ ! ನನ್ನನ್ನು ಸಂತೋಷಗೊಳಿಸುವುದಕ್ಕಾಗಿ ನನ್ನ ಅವತಾರ ದಿನ ಮಹೋತ್ಸವ (ಜನುಮದಿನೋತ್ಸವ) ಡೋಲೋತ್ಸವ, ಶಯನೋತ್ಸವ, ಜಾಗರಣೋತ್ಸವ, ನನ್ನ ವಿಶ್ವರೂಪದರ್ಶನ ಮಹೋತ್ಸವ, ಆರ್ಯವೈಶ್ಯರ ಆತ್ಮಾರ್ಪಣದಿನ ಮಹೋತ್ಸವ, ನನ್ನ ಪಟ್ಟಾಭಿಷೇಕ ಮಹೋತ್ಸವ, ರಥೋತ್ಸವ, ಪವಿತೋತ್ಸವ ಮೊದಲಾದ ಉತ್ಸವಗಳನ್ನು ನೀವು ವೈಭವೋಪೇತವಾಗಿ ನಡೆಸಿಕೊಳ್ಳಿರಿ. ಸರ್ವದೇವತಾಸ್ವರೂಪಿಣಿಯಾದ ನನ್ನ ಉತ್ಸವಗಳ ನಿರ್ವಹಣೆಯ ವಿಧಾನಗಳು ಧರ್ಮಶಾಸ್ತ್ರಗಳಲ್ಲಿಯು, ಆಗಮಶಾಸ್ತ್ರಗಳಲ್ಲಿಯು ವಿವರಿಸಲ್ಪಟ್ಟು ಸುಪ್ರಸಿದ್ಧವಾಗಿವೆ. ನನ್ನ ವ್ರತೋತ್ಸವ ಕಾರ್ಯಕ್ರಮಗಳಲ್ಲಿ ಮತ್ತು ನನ್ನ ವಿಗ್ರಹ ಪ್ರತಿಷ್ಠಾಮಹೋತ್ಸವಗಳಲ್ಲಿ ನನ್ನ ಭಕ್ತರು ಗೌರವಬಾಲಿಕೆಯರನ್ನು ಬಾಲನಗರರನ್ನು (ವಟುಗಳನ್ನು) ಸುವಾಸಿನಿಯರನ್ನು, ಮತ್ತು ದೀನಜನರನ್ನು ನಾನೆಂದು ಭಾವಿಸಿ ಪೂಜಿಸಿ ಅವರಿಗೆ ಪಕ್ವಾನ್ನಾದಿಗಳನ್ನು ಉಣಬಡಿಸಬೇಕು, ಎಂದು ವಾತ್ಸಲ್ಯದಿಂದ ನುಡಿದ ವಾಸವಿ ಕನ್ಯಕೆಯನ್ನು ನೋಡಿ ವಿರೂಪಾಕ್ಷನು, 'ಹೇ ದೇವದೇವೀಶ್ವರಿ ! ನಿನ್ನನ್ನು ಪೂಜಿಸಲು ತಕ್ಕ ಶಾಸ್ತ್ರೀಯ ಕ್ರಮವನ್ನು ದಯೆಮಾಡಿ ನಮಗೀಗ ಅರುಹಿಸು, ಎಂದು ಪ್ರಾರ್ಥಿಸಿದನು. ಆಗ ಆ ವಾಸವಿ ದೇವಿಯು, ವೈಶ್ಯವರರೇ ! ನನಗೆ ವಿಶೇಷವಾಗಿ ಪ್ರೀತಿಕರವಾದ ಪೂಜಾವಿಧಾನಗಳನ್ನು

ಹೇಳುತ್ತಿರುವೆ ಶ್ರದ್ಧೆಯಿಂದ ಆಲಿಸಿರಿ.

ನನ್ನ ಅರ್ಚನೆಯು ಬಾಹ್ಯಾಭ್ಯಂತರ ಭೇದದಿಂದ ಎರಡು ವಿಧಗಳಿವೆ ಬಾಹ್ಯಾರ್ಚನೆಯಲ್ಲಿ ವೇದೋಕ್ತವಾದ ನನ್ನ ಪೂಜೆ ಮೂರ್ತಿಬೇದದಿಂದ 2 ವಿಧಗಳಿವೆ. **ಮೊದಲನೆಯದು ನಿಖಿಲ ಜಗದಾಕಾರವಾದ ನನ್ನ ವಿರಾಟ್ರೂಪದ ಧ್ಯಾನರೂಪವಾಗಿದೆ. ಎರಡನೆಯದು ಸುಂದರ ಸುಕುಮಾರ ಸರ್ವಾಭರಣಭೂಷಿತವಾದ ಹಸ್ತಪಾದಾದಿ ಸಂಯುತವಾದ ನನ್ನ ದಿವ್ಯ ಮಂಗಳ ವಿಗ್ರಹವನ್ನು ವೇದೋಕ್ತವಾದ ಮಂತ್ರಗಳಿಂದ ಆವಾಹನೆ ಮೊಹಲ್ಗೊಂಡು ಉದ್ವಾಸನದವರೆಗು ಮಾಡುವ ಪೂಜೆಯಾಗಿದೆ.** ಹೀಗೆ ಮೂರ್ತಿಭೇದದಿಂದ 2 ವಿಧದ ಪೂಜೆಗು ಸಮಯಾಚಾರ ವಿಧಿಯನ್ನು ಅನುಸರಿಸಿ ಮಾಡಬೇಕು.

ಓ ಸುಕೃತಿಗಳೇ ! ಈ ಮೊದಲನೆಯದಾದ ನನ್ನ ವೈದಿಕ ಪೂಜಾಸ್ವರೂಪದ ಮಹತ್ವವನ್ನು ಕೇಳಿರಿ. ನಿಶ್ಚಲವಾದ ಶಾಂತಚಿತ್ತವಳ್ಳವನಾಗಿ ದಂಭವನ್ನು, ಅಹಂಕಾರವನ್ನು ತೊರೆದು ಪಿಪೀಲಿಕಾದ ಬ್ರಹ್ಮಪರ್ಯಂತ ಸಮಸ್ತ ಚರಾಚರ ವಿಶ್ವವೇ ಆಕಾರವಾಗಿರುವ ನನ್ನ ವಿರಾಟ್ರೂಪವನ್ನು ದರ್ಶಿಸುತ್ತ ಭಕ್ತನು ತನ್ಮಯನಾಗಬೇಕು. ನನ್ನಲ್ಲಿ ಅನನ್ಯವಾದ ಪ್ರೇಮಹೊಂದಿದವನಾಗಿ ಸರ್ವಕ್ಕೂ ಆಶ್ರಯಳಾದ ಪ್ರೇಮಸ್ವರೂಪಿಣಿಯಾದ ನನ್ನ ಭಾವವನ್ನು ಭಕ್ತಿಯಿಂದ ಆಶ್ರಯಿಸಿ, ಯಜ್ಞಯಾಗಾದಿಗಳಿಂದಲೂ, ತಪೋವ್ರತದಾನಾದಿಗಳಿಂದಲೂ ನನ್ನನ್ನೇ ಮೆಚ್ಚಿಸುತ್ತ ಸಂತೋಷಗೊಳಿಸಬೇಕು. ಹೀಗೆ ಆಚರಿಸುವವನು ನನ್ನ ಸಂಪೂರ್ಣ ಅನುಗ್ರಹವನ್ನು ಹೊಂದಿ, ಅನಾದಿ ಭವಬಂಧಗಳಿಂದ ವಿಮುಕ್ತನಾಗಬಲ್ಲನು. ಪುತ್ರರೇ ! ಶೃತಿಗಳು ಹೇಳಿದ ಕರ್ಮಾಚರಣೆಯಿಂದ ಕೂಡಿದ ಧ್ಯಾನದಿಂದಲೂ, ಭಕ್ತಿಯಿಂದ ಅಲಂಕರಿಸಲ್ಪಟ್ಟ ಜ್ಞಾನದಿಂದಲೂ ನನ್ನನ್ನು ಹೊಂದಬಲ್ಲರು. ಆದರೆ **ಕೇವಲ ಶುಷ್ಕಾಚರಣೆಯಿಂದ ನನ್ನನ್ನು ಹೊಂದಲಾರರು.**

ಇನ್ನು ಹಸ್ತಪಾದಾದಿ ಅವಯವಗಳಿಂದ ವಿರಾಜಿಸುವ ನನ್ನ ಮಂಗಳ ಸ್ವರೂಪದ ಎರಡನೆಯ ವೈದಿಕ ಪೂಜಾವಿಧಾನವನ್ನು ಹೇಳುತ್ತಿರುವೆ. ಭಕ್ತನು ಪ್ರಾತಃ ಕಾಲದಲ್ಲಿಯೇ ಎದ್ದು ತನ್ನ ಶಿರದಲ್ಲಿ ಸಹಸ್ರದಳ ಪದ್ಮಾಕಾರ ಕಮಲದಲ್ಲಿ ಪ್ರಸನ್ನನಾದ ತನ್ನ ಗುರುವು ವಿರಾಜಮಾನನಾಗಿರುವನೆಂದು ಭಾವಿಸಿ ಗುರುವಿನ ಮಂಗಳ ಮೂರ್ತಿಯನ್ನು ಸ್ಮರಿಸಬೇಕು. ಸದ್ಗುರುವಿಗೆ ನಮಸ್ಕರಿಸಿದ ಬಳಿಕ ಮೂಲಾಧಾರ ಕಮಲದಲ್ಲಿ ಕುಂಡಲಿನೀ ಶಕ್ತಿಯನ್ನು

ಸಂಸ್ಮರಿಸಬೇಕು. ಚಿದಗ್ನಿಶಿಖೆಯ ರೂಪದಲ್ಲಿರುವ ಆ ಕುಂಡಲಿನೀ ಮಧ್ಯದಲ್ಲಿ ಸಚ್ಚಿದಾನಂದರೂಪಿಣಿಯಾದ ನನ್ನನ್ನು ಭಾವಿಸಿ ಧ್ಯಾನಿಸಬೇಕು. ಅನಂತರ ಶೌಚದಿಂದ ಮೊದಲಾಗಿ ಸಂಧ್ಯಾವಂದನೆಯವರೆಗಿನ ಕರ್ಮಗಳನ್ನು ಶ್ರದ್ಧೆಯಿಂದ ಆಚರಿಸಬೇಕು ನಿತ್ಯೋಪಾಸನಾರೂಪವಾದ ಅಗ್ನ್ಯಾರಾಧನೆ ಮಾಡುವವರು ನನ್ನನ್ನು ಪ್ರಸನ್ನಳಾಗಿಸುವುದ ಕ್ಕಾಗಿ ಅಗ್ನಿಕಾರ್ಯಮಾಡಬೇಕು. ಅನಂತರ ಯುಕ್ತಾಸೀನನಾಗಿ ಪೂಜಾಸಂಕಲ್ಪ ಮಾಡಬೇಕು. ಮೊದಲು ಭೂತಶುದ್ಧಿ, ಭೂಮಿಶುದ್ಧಿ ಮಾಡಿ ಪೀಠವನ್ನು ಅಲಂಕರಿಸಿ ನನ್ನ ಪೂಜೆಯನ್ನು ಆರಂಭಿಸಬೇಕು. ಭಕ್ತನು ತನ್ನ ದೇಹದಲ್ಲಿ ಧರ್ಮಾದಿಗಳಿಂದ ನನ್ನ ಪೀಠವನ್ನು ರಚಿಸಿಕೊಂಡಂತೆ ಭಾವಿಸಬೇಕು. ನನ್ನನ್ನು ಶ್ರೀ ವಾಸವಿ ಕನ್ಯಾಚಕ್ರದಲ್ಲಿರುವಂತೆ ಧ್ಯಾನಿಸಬೇಕು. ಆ ಬಳಿಕ ಪ್ರಾಣಾಯಾಮ ಮಾಡಬೇಕು. ತಾವು ಮಾಡಿದ ಜಪತಪಗಳನ್ನು ನನಗೆ ಅರ್ಪಿಸಿ ಬಾಹ್ಯಪೂಜೆ ಆಚರಿಸಲು ಆಚಮನ ಕಲಶಾರಾಧನೆಗಳನ್ನು ಮಾಡಬೇಕು. ಆ ಬಳಿಕ ಮಂತ್ರಪೂತಜಲದಿಂದ ಪೂಜಾದ್ರವ್ಯಗಳನ್ನು ಪ್ರೋಕ್ಷಿಸಬೇಕು. ಗುರುನಮಸ್ಕಾರ ಮಾಡಿ ಹೊರಗೆ ಸಿದ್ಧಮಾಡಿದ ಪೀಠದಲ್ಲಿಯು ಯಂತ್ರಾದಿಗಳಲ್ಲಿಯು ಆವಾಹನೆ ಮಾಡಿ ಪ್ರಾಣಪ್ರತಿಷ್ಠಾ ಮಂತ್ರದಿಂದ ನನ್ನನ್ನು ಪ್ರತಿಷ್ಠಪಿಸಬೇಕು. ಅನಂತರ ಆವರಣಾಧಿಷ್ಠಿತ ದೇವತೆಗಳನ್ನು ಪೂಜಿಸಬೇಕು. ಸಮಸ್ತ ಜಗದಾಧಾರಿಣಿಯಾದ ನನ್ನ ಪ್ರಭೆಯೇ ರೂಪವಾಗುಳ್ಳ ನನ್ನ ಅಂಗೋಪಾಂಗ ದೇವತೆಗಳನ್ನು ಪೂಜಿಸಬೇಕು. ಹೀಗೆ ಆವರಣ ದೇವತೆಗಳನ್ನು ಆಯಾ ಆವರಣಗಳಲ್ಲಿರುವಂತೆ ಭಾವಿಸಿ ಪೂಜಿಸಿದ ಬಳಿಕ ಅಂಗೋಪಾಂಗ ದೇವತೆಗಳೊಡನೆಯೂ ಪರಿವಾರ ಶಕ್ತಿಗಳೊಡನೆಯೂ ರಾರಾಜಿಸುತ್ತಿರುವ ನನಗೆ ಯಥಾಶಕ್ತಿ ಸಂಪಾದಿತವಾದ ಆಸನ, ಆವಾಹನ, ಅರ್ಘ್ಯ, ಪಾದ್ಯ, ಆಚಮನೀಯ ಸ್ನಾನ, ವಸ್ತ್ರಯುಗ್ಮ, ಭೂಷಣ, ಗಂಧ ಪುಷ್ಪಾಕ್ಷತೆ ಮುಂತಾದುವುಗಳನ್ನು ಸಮರ್ಪಿಸಿ ನನ್ನ ಪವಿತ್ರ ನಾಮಾವಳಿಯಿಂದ ನನ್ನನ್ನು ಕೀರ್ತಿಸಿ, ಅನಂತರ ಭಕ್ಷ್ಯ, ಭೋಜ್ಯ, ಲೇಹ್ಯ ಚೋಷ್ಯ ರೂಪಗಳಲ್ಲಿರುವ ನೈವೇದ್ಯಗಳಿಂದಲೂ, ತಾಂಬೂಲ ದಕ್ಷಿಣಾದಿಗಳಿಂದಲೂ, ಮಂಗಳ ನೀರಾಜನಗಳಿಂದಲೂ ಪರಿಪೂರ್ಣ ಭಕ್ತಿಶ್ರದ್ಧೆಗಳಿಂದ ಕೂಡಿ ನನ್ನನ್ನು ಪೂಜಿಸಬೇಕು. ಆಗಮಾದಿಗಳಲ್ಲಿ ಹೇಳಲ್ಪಟ್ಟಿರುವ ಕವಚ, ಮೂಲ, ಹೃದಯ ಸ್ತೋತ್ರಗಳಿಂದಲೂ, ದೇವೀ ಸೂಕ್ತಗಳಿಂದಲೂ, ಹೃಲ್ಲೇಖಾದ ಮಂತ್ರಗಳಿಂದಲೂ, ಸರ್ವ ವಿದ್ಯಾಧಿಷ್ಠಿತಳಾದ ನನ್ನನ್ನು ಮತ್ತೆ

ಮತ್ತೆ ಸಂತೋಷಗೊಳಿಸಬೇಕು, ನನ್ನ ಸಹಸ್ರನಾಮಾದಿಗಳಿಂದ ನನ್ನನ್ನು ಕೀರ್ತಿಸಬೇಕು. ತಾನು ಮಾಡಿದ ಅಪರಾಧಗಳನ್ನು ಹೇಳಿಕೊಂಡು ಕ್ಷಮಾಪಣೆ ಬೇಡಬೇಕು. ವೇದಪುರಾಣಪಾರಾಯಣಾದಿಗಳಿಂದ ನನ್ನನ್ನು ಆನಂದಗೊಳಿಸಬೇಕು. ಅವುಗಳಲ್ಲಿ ಅಂತರ್ಯಾಮಿನಿಯಾಗಿ ವಿವಿಧ ಅವತಾರಗಳ ರೂಪದಲ್ಲಿ ನಾನೇ ಪ್ರತಿಪಾದಿತಳಾಗಿರುವೆನು. ಸುವಾಸಿನಿಯರನ್ನು, ಕನ್ಯೆಯರನ್ನು ದೀನಜನರನ್ನು ನನ್ನ ಪ್ರತಿರೂಪವಾಗಿಯೇ ಭಾವಿಸಿ ಗೌರವ ಸಮರ್ಪಿಸಬೇಕು. ಬಳಿಕ ನನಗೆ ಸಾಷ್ಟಾಂಗ ಪ್ರಣಾಮಗಳನ್ನು ಆಚರಿಸಿ, ಪೀಠದಲ್ಲಿ ಅರ್ಚಿತಳಾದ ನನ್ನನ್ನು ತನ್ನ ಹೃದಯ ಮಂದಿರದಲ್ಲಿ ಸೇರಿಸಿಕೊಳ್ಳಬೇಕು. ಹೀಗೆ ನನ್ನನ್ನು ಅರ್ಚಿಸುವವರು ನನ್ನ ಸಾನ್ನಿಧ್ಯವನ್ನು ಹೊಂದಬಲ್ಲರು.

ಈಗ ನಾನು ನಿಮಗೆ ಅಂತರ್ಪೂಜಾ ವಿಧಾನವನ್ನು ಬೋಧಿಸುತ್ತಿರುವೆ, ಕೇಳಿರಿ. ಅಂತರ್ಪೂಜೆಯೆಂದರೆ ಚಿದೇಕರಸಬ್ರಹ್ಮ ಸ್ವರೂಪಿಣಿಯಾದ ನನ್ನ ನಿರಾಕಾರತತ್ವದಲ್ಲಿ ಚಿತ್ತವನ್ನು ಲಯಗೊಳಿಸಬೇಕು. ಮೇಲೆ ಹೇಳಿದ ಬಾಹ್ಯಪೂಜೆಯನ್ನು ತೊರೆದು ಸಾಧಕನು ಅಂತರ ಪೂಜೆಯನ್ನು ಏಕೆ ಆಶ್ರಯಿಸಬೇಕೆಂದು ಕೇಳಿರಿ. ನಿರಾಕಾರ, ನಿರ್ವಿಕಾರ ಶುದ್ಧ ಬುದ್ಧ ಮುಕ್ತ ಜ್ಞಾನಮಾತ್ರವೇ ನನ್ನ ಯಥಾರ್ಥರೂಪವಾಗಿದೆ. ಜೀವನು ಅಜ್ಞಾನದಿಂದ ತನ್ನ ಚಿನ್ಮಾತ್ರತ್ವವನ್ನು ಮರೆತು ಭ್ರಾಂತಿಯಿಂದ ಕಲ್ಪಿತವಾದ ದೇಹಗೇಹಾದಿಗಳಲ್ಲಿ ಅಹಂಕಾರ, ಮಮಕಾರಗಳನ್ನು ಹೊಂದಿ ನಿರಂತರ ಜನನ ಮರಣಾದಿ ಕ್ಲೇಶಪ್ರವಾಹದಲ್ಲಿ ಬಿದ್ದು ಕೊಚ್ಚಿಹೋಗುತ್ತ ಎಂದಿಗೂ ತೀರವನ್ನು ಸೇರದಾಗಿದ್ದಾನೆ. ಸತ್ಯವನ್ನು ವಿಚಾರಮಾಡಿ ಸದ್ಗುರು ಸೇವೆಯಿಂದ ತತ್ವವನ್ನು ಪಡೆದು ಸತ್ಯಜ್ಞಾನಾನಂದ ಘನವಾದ ನನ್ನ ಸ್ವರೂಪಕ್ಕಿಂತ ಬೇರಾಗಿ, ಹಗ್ಗದಲ್ಲಿ ತೋರಿದ ಹಾವಿನಂತೆ, ಮೃಗಜಲದಂತೆ, ಸ್ವಪ್ನಪದಾರ್ಥಗಳಂತೆ ಅಸತ್ಯ ಜಡ ದುಃಖಾತ್ಮಕವಾದ ಈ ಜಗತ್ತೆಲ್ಲ ಮಾಯಾಮಯವೆಂದು ತಿಳಿದುಕೊಂಡು ನನ್ನ ಚಿದ್ರೂಪದಲ್ಲೇ ಚಿತ್ತವನ್ನು ನಿಲ್ಲಿಸಬೇಕು. ನಿರಂತರ ಪ್ರತ್ಯಗಾತ್ಮ ಸಾಕ್ಷೀಭಾವನಾ ತತ್ಪರನಾಗಿ ಸಂಸಾರ ಸಮುದ್ರವನ್ನು ದಾಟಬೇಕು, ಇಂಥ ಅಂತರ್ಪೂಜೆಯನ್ನು ಆಚರಿಸುವ ಯೋಗ್ಯತೆಯು ಪ್ರಾಪ್ತಿಯಾಗುವವರೆಗೂ ನನ್ನ ಬಾಹ್ಯಪೂಜೆಯನ್ನು ಬಿಡದೆ ಮಾಡುತ್ತಿರಬೇಕು, ಎಂದು ತನ್ನ ಪೂಜಾವಿಧಾನಗಳನ್ನು ಕುರಿತು ಶ್ರೀವಾಸವಿ ಕನ್ಯಕಾ ಪರಮೇಶ್ವರಿಯು ಪ್ರಬೋಧೆಯನ್ನುನೀಡಿದಳು.

ಆ ಬಳಿಕ ವೈಶ್ಯರನ್ನು ನೋಡಿ,'ಕುಮಾರರೇ ! ಭೂತಲದಲ್ಲಿ ಇತರರಿಗೆ ದುರ್ಲಭವಾದ ಅದ್ಭುತವಾದ ಕೀರ್ತಿಯನ್ನು ಸಂಪಾದಿಸಿದಿರಿ. ಧರ್ಮರಕ್ಷಣೆಯಲ್ಲಿ ಆಸಕ್ತರಾದ ಮಾನವರು ಸದಾಕಾಲ ಪ್ರಶಂಸನೀಯರಾಗಿರುವರು.

ಹೇ ಭಕ್ತವರರೇ ! ಆರ್ಷಧರ್ಮವನ್ನು ಅನುಸರಿಸಿ ವರ್ಣಾಶ್ರಮ ವಿಧಿಗಳನ್ನು ಪಾಲಿಸುತ್ತ ಸೂತ್ರಕಾರರು ನಿರ್ಣಯಿಸಿರುವ ಷೋಡಶಸಂಸ್ಕಾರಗಳನ್ನು ಆಚರಿಸುತ್ತ ನಾನು ತೋರಿಸಿದ ತ್ಯಾಗಾಹಿಂಸಾತ್ಮಕ ನೂತನ ಧರ್ಮವನ್ನು ಈ ಯುಗದಲ್ಲಿ ಅನುಸರಣೀಯವಾದ ಪರಮಧರ್ಮವೆಂದು ಸ್ವೀಕರಿಸಿ ಅಖಿಲಪ್ರಪಂಚದಲ್ಲಿ ಈ ಪ್ರವಿಮಲ ಧರ್ಮಪ್ರಚಾರವನ್ನು ಮಾಡುತ್ತ ವಿಶ್ವಶಾಂತಿಯನ್ನು ಸಾಧಿಸಬೇಕು. ಸಮಸ್ತ ವೈಶ್ಯರು ಅಭಿಮಾನಧನರಾಗಿ ಐಕ್ಯಮತದಿಂದ ಬೆಳಗಬೇಕು. ಶೈವ ವೈಷ್ಣವ ಶಾಕ್ತೇಯ ಗಣಪತ್ಯಾದಿ ಸಮಸ್ತ ಮತ ಸಂಪ್ರದಾಯಗಳಲ್ಲಿ ಸಮದೃಷ್ಟಿ ಹೊಂದಿ ಸರ್ವಮತಸಾಮರಸ್ಯದಿಂದ ಪ್ರಜಾಪಾಲನೆ ಮಾಡಬೇಕು. 'ಪುತ್ರರೇ ! ಈ ವಾಸವಿಕನ್ಯಕಾ ಪರಮೇಶ್ವರಿ ದಿವ್ಯಾವತಾರಮೂರ್ತಿ ನಿಲಯಗಳಾದ ಆಲಯಗಳು ಪ್ರಪಂಚದೆಲ್ಲೆಡೆ ನೆಲೆಸುವುವು. ನಾನು ತೋರಿಸಿದ ಅಹಿಂಸಾತ್ಮಕ ವಿನೂತನ ಧರ್ಮಮಾರ್ಗವೇ ಅಖಿಲಪ್ರಪಂಚಕ್ಕೆ ಅನುಸರಣೀಯವಾಗುವುದು. ಈ ಪವಿತ್ರ ಭಾರತ ಭೂಮಿಯಲ್ಲಿ ಪ್ರಕಾಶಿಸುವ ವೈಶ್ಯವಂಶದಲ್ಲಿ ವಿಶ್ವವಿಖ್ಯಾತ ಮಹಾತ್ಮರು ಉದಿಸಿ, ಮಾತೃದೇಶ, ಸ್ವಾತಂತ್ರ್ಯಗಳನ್ನು ಸಂರಕ್ಷಿಸಿ ವಿಶ್ವಕಲ್ಯಾಣವನ್ನು ಸಾಧಿಸಬಲ್ಲರು. ಸುಕುಮಾರರೇ ! 714 ಗೋತ್ರಗಳವರೊಡನೆ ಮಹಾಸಂಘವಾಗಿ ವಿರಾಜಿಸಿದ್ದ ವೈಶ್ಯವರ್ಣವು ಈಗ ವಿಭಕ್ತವಾಯಿತಲ್ಲವೆ ಎಂದು ಚಿಂತಿಸತಕ್ಕದ್ದಲ್ಲ. **ಕಾಲ ಪ್ರಭಾವ ಮತ್ತು ವಿಧಿವಿಲಾಸವು ಅನಿವಾರ್ಯವು**. ಇಂದು ನಿಮ್ಮಿಂದ ಬೇರಾಗಿ ವಿವಿಧ ಪ್ರಾಂತ್ಯಗಳಿಗೆ ಹೊರಟುಹೋದ ವೈಶ್ಯರೂ ಹಿಂದೆ ಬಹು ಪ್ರಾಂತ್ಯಗಳಲ್ಲಿ ನಿರ್ವಹಿಸುತ್ತಿದ್ದ ಪೂರ್ವವೈಶ್ಯವಂಶಗಳವರೂ ನನ್ನ ಕೃಪೆಯಿಂದ ಭವಿಷ್ಯತ್ಕಾಲದಲ್ಲಿ ಮತ್ತೆ ಏಕವಾಗಬಲ್ಲರು. **ಇದು ನಿಸ್ಸಂಶಯ,** ಎಂದು ಹೀಗೆ ಉಪದೇಶಿಸಿ ಶ್ರೀವಾಸವಿ ಕನ್ಯಕಾ ದೇವಿ ಅಂತರ್ದಾನಳಾದಳು.

ಅನಂತರ ಅಲ್ಲಿಯ ಪ್ರಜೆಗಳೆಲ್ಲರು ಪರಮಾನಂದಭರಿತರಾಗಿ ವಾಸವಿದೇವಿಯನ್ನು ಕೀರ್ತಿಸುತ್ತ ಹೊರಟು ರಾಜಸಭಾಪ್ರಾಂಗಣವನ್ನು ಸೇರಿದರು. ಆ ಬಳಿಕ 18 ಪಟ್ಟಣಗಳ

ನಿವಾಸಿಗಳಾದ ವಿರೂಪಾಕ್ಷಾದಿ ಪ್ರಮುಖರು ಆ ಬಂಧುಜನರೊಡನೆ (2 ಮೈಲಿ) ದೂರದ-ವರೆಗೂ ಅನುಸರಿಸಿ ಹೋಗಿ ಅವರನ್ನು ಬೀಳ್ಕೊಟ್ಟು ಪೆನುಗೊಂಡೆ ಪಟ್ಟಣಕ್ಕೆ ಹಿಂದಿರುಗಿದರು. ಅಂದಿನಿಂದ **ಆರ್ಯವೈಶ್ಯರ ತ್ಯಾಗಮಯ ದಿವ್ಯಕೀರ್ತಿಯು ದಿಗ್ ದಿಗಂತ ಪರಿವ್ಯಾಪ್ತವಾಯಿತು.**

## ಫಲಶೃತಿ

ಹೀಗೆ ಸಾಲಂಕಾಯನ ಮಹರ್ಷಿಯು ಮಣಿಗುಪ್ತಾದಿಗಳಿಗೆ ಶ್ರೀವಾಸವಿ ಕನ್ಯಕಾ ಪರಮೇಶ್ವರಿಯ ಪುಣ್ಯಕಥೆಯನ್ನು ಸವಿಸ್ತಾರವಾಗಿ ತಿಳಿಸಿ ಈ ದಿವ್ಯಕಥೆಗೆ ಸಮಾನವಾದ ಕಥೆಯು ಈವರೆಗೆ ಇಲ್ಲ.

ಮುಂದೆ ಇರದೂ ಕೂಡ ಇದು ಸಕಲದುಃಖಗಳನ್ನು ಶಮನಗೊಳಿಸುವುದು. ಸಮಸ್ತ ಸಂಪತ್ತುಗಳನ್ನು ವೃದ್ಧಿಗೊಳಿಸುವುದು. ಶ್ರೀವಾಸವಿ ಕನ್ಯಕಾ ಪುರಾಣಕಥಾ ಪಾರಾಯಣವು ಅಕಾಲ ಮೃತ್ಯುವು ಬರದಂತೆ ತಡೆಯುವುದು. ಸರ್ವವಿಧ ವ್ಯಾಧಿಗಳನ್ನು, ಬಾಧೆಗಳನ್ನು ತೊಲಗಿಸಿ, ಆಯುರಾರೋಗ್ಯಗಳನ್ನು ಪ್ರಸಾದಿಸುವುದು. ಸತ್ಸಂತಾನವನ್ನು ಪ್ರಸಾದಿಸುವುದು. ಧರ್ಮ, ಅರ್ಥ, ಕಾಮ ಮೋಕ್ಷಗಳೆಂಬ ಚತುರ್ವಿಧ ಪುರುಷಾರ್ಥಫಲಗಳು ದೊರೆಯುವಂತೆ ಮಾಡುವುದು. ಬುದ್ಧಿವಂತರು ತಮ್ಮ ಜೀವನದಲ್ಲಿ ಒಮ್ಮೆಯಾದರೂ ಈ ದಿವ್ಯಚರಿತ್ರೆಯನ್ನು ಶ್ರವಣಮಾಡಿದರೂ ಪಠಿಸಿದರೂ ಗಂಗಾದಿ ಪುಣ್ಯ ನದಿಗಳಲ್ಲಿ ಕೋಟಿಜನ್ಮಗಳು ಸ್ನಾನಮಾಡಿದ ಪುಣಫಲವನ್ನು ಹೊಂದಬಲ್ಲರು. ಅವರು ಪರಮ ಪವಿತ್ರ ಕಾಶೀಕ್ಷೇತ್ರದಲ್ಲಿ ಕೋಟಿ ಲಿಂಗಗಳನ್ನು ಪ್ರತಿಷ್ಠೆಮಾಡಿದ ಫಲವನ್ನು ಹೊಂದ ಬಲ್ಲರು. ಪವಿತ್ರ ಗಂಗಾತೀರದಲ್ಲಿ ಕೋಟಿ ಅಶ್ವಮೇಧಯಾಗಗಳನ್ನು ಆಚರಿಸಿದ ಫಲವು ಅವರಿಗೆ ಕೈಗೂಡುವುದು. ಮರಳುಗಾಡಿನಲ್ಲಿ ಕೋಟಿ ಬಾವಿಗಳನ್ನು ತೋಡಿಸುವುದರಿಂದ, ಅನಾವೃಷ್ಟಿಕಾಲದಲ್ಲಿ ಕೋಟಿಮಂದಿಗೆ ಅನ್ನದಾನ ಮಾಡುವುದರಿಂದ ಎಷ್ಟು ಪುಣ್ಯ ಲಭಿಸುವುದೋ ಅದಕ್ಕೆ ಕೋಟಿ ಪಟ್ಟು ಅಧಿಕವಾದ ಪುಣ್ಯವು ಶ್ರೀ ವಾಸವಿಕನ್ಯಕಾ ಪರಮೇಶ್ವರಿ ದಿವ್ಯಚರಿತ್ರೆಯನ್ನು ಕೇಳುವವರಿಗೆ, ಪಠಿಸುವವರಿಗೆ, ಬೋಧಿಸುವವರಿಗೆ ಪ್ರಾಪ್ತಿಯಾಗುವುದು.

ಯಾರು ಈ ಕನ್ಯಕಾ ದೇವಿ ಪುರಾಣಗ್ರಂಥವನ್ನು ತಮ್ಮ ಮನೆಯಲ್ಲಿರಿಸಿಕೊಂಡು ಭಕ್ತಿಯಿಂದ

ಪಠಿಸುವರೋ ಅವರ ಮನೆಗಳಲ್ಲಿ ಲಕ್ಷ್ಮೀದೇವಿ ಸ್ಥಿರವಾಗಿ ನಿವಾಸ ಮಾಡುವಳು. ಅಂಥವರ ನಾಲಿಗೆಗಳ ಮೇಲೆ ಸರಸ್ವತಿ ದೇವಿಯು ನಾಟ್ಯವಾಡುವಳು. ಅನುದಿನವು ವಾಸವಿದೇವಿಯನ್ನು ಸ್ಮರಿಸುವ ಭಕ್ತರು ಬಯಸಿದ ಕಾಮನೆಗಳೆಲ್ಲವು ತೀರಿ ಅಭೀಷ್ಟ ಭೋಗಗಳನ್ನು ಅನುಭವಿಸಿ ಅಂತ್ಯದಲ್ಲಿ ಅತ್ಯಂತ ದುರ್ಲಭವಾದ ದೇವಿ ಲೋಕವನ್ನು ಹೊಂದಬಲ್ಲರು. ಯಾವ ಕೋರಿಕೆಯೂ ಇಲ್ಲದೆ ನಿಷ್ಕಾಮವಾಗಿ ಯಾರು ಈ ಮಹತ್ತರವಾದ ಶ್ರೀವಾಸವಿ ಕಥೆಯನ್ನು ಪಠಿಸುವರೋ ಅಂಥವರಿಗೆ ಸಕಲ ಬಂಧನಗಳನ್ನು ನೀಗಿಸುವ ಬ್ರಹ್ಮಜ್ಞಾನವು ಉಂಟಾಗುವುದು.

ಹೀಗೆ ಇಹ ಪರ ಸೌಖ್ಯಗಳೆರಡನ್ನೂ ಪ್ರಸಾದಿಸುವ ಈ ಮಹಿಮಾಪೂರ್ಣ ಚರಿತ್ರೆಯು ಸಮಸ್ತ ವರ್ಣಗಳ ಜನರಿಗೂ, ಬ್ರಹ್ಮಚರ್ಯಾದಿ ಸಮಸ್ತ ಆಶ್ರಮಗಳವರಿಗೂ ತಮ್ಮ ಧರ್ಮಾಚರಣೆಯಲ್ಲಿ ಉಂಟಾಗುವ ಲೋಪಗಳನ್ನು ತಿದ್ದಿಕೊಂಡು ದಿವ್ಯಜೀವನವನ್ನು ಹೊಂದುವುದಕ್ಕೆ ತಕ್ಕ ಜ್ಞಾನವನ್ನು ಪ್ರಸಾದಿಸಬಲ್ಲದು. ಆದ್ದರಿಂದ ಇದು ಅವಶ್ಯವಾಗಿ ಪಠನೀಯವಾಗಿದೆ ಎಂದು **ಹೇಳಿ ಹೀಗೆ** ಸ್ವಸ್ತಿವಚನಗಳನ್ನು ನುಡಿದರು.

ಓಂ. ಅಸತೋಮಾಸದ್ಗಮಯ

ತಮಸೋ ಮಾ ಜ್ಯೋತಿರ್ಗಮಯ

ಮೃತ್ಯೋರ್ಮಾ ಮೃತಂ ಗಮಯ

ಸರ್ವೇಷಾಂ ಸ್ವಸ್ತಿರ್ಭವತು

ಸರ್ವೇಷಾಂ ಶಾಂತಿರ್ಭವತು

ಸರ್ವೇಷಾಂ ಪೂರ್ಣಂಭವತು

ಲೋಕಾಃ ಸಮಸ್ತಾ ಸ್ಸುಖಿನೋ ಭವಂತು

ಓಂತತ್ಸತ್ – ಮಂಗಳಂಮಹತ್

**ಓಂ ಶಾಂತಿ ಶಾಂತಿ ಶಾಂತಿಃ**

**ಶ್ರೀ ವಾಸವಿ ಕನ್ಯಕಾ ದೇವಿ ಪುರಾಣವು ಸಮಾಪ್ತವು**